**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**MVC** 258/2025 **RW**-1

ದಿಃ07.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ 1 ಮತ್ತು 2 ನೇ ಎದುರುದಾರ ಪರ ವಕೀಲರಾದ ಶ್ರೀ ಎ ಆರ ಅಥಣಿ ರವರಿಂದ.**

ನಾನು 1 ಮತ್ತು 2 ನೇ ಎದುರುದಾರ ಪರ ಸಾಕ್ಷಿದಾರನಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಈ ದಿನ ನ್ಯಾಯಾಲಯದ ಮುಂದೆ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿರುವ ಸಹಿ ನನ್ನದು.

ನಾನು ನನ್ನ ವಿಚಾರಣೆಗೆ ಸಂಬಂಧಿಸಿದಂತೆ ನೋಟರಿಯವರು ದೃಢೀಕರಿಸಿದ ಅಧಿಕಾರ ಪತ್ರ ಹಾಗೂ ನೋಟರಿಯವರು ದೃಢೀಕರಿಸಿದ ಉಚಿತ ಪ್ರಯಾಣದ ಚೀಟಿಯ ನಕಲನ್ನು ನಿಶಾನೆ ಆರ 1 ಮತ್ತು ನಿಶಾನೆ ಆರ 2 ಎಂದು ಗುರ್ತಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎಸ ಆರ ಟಿ ವಕೀಲರಿಂದ**

ಅಪಘಾತವಾದ ದಿವಸ ಆ ಬಸ್ಸನ ಚಾಲಕ ನಾನೆ ಇದ್ದೆ ಎಂದರೆ ಸರಿ.ಸದರಿ ಅಪಘಾತದಿಂದ ಸುಮಾರು 13-14 ಮಂದಿಗೆ ಗಾಯವಾಗಿತ್ತು. ಈ ಕೇಸನ ಅರ್ಜಿದಾರರ ಹೆಸರು ಏನೆಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಗಾಯಾಳುಗಳನ್ನು ಅಪಘಾತವಾದ ತಕ್ಷಣ ಯಾರು ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಸಾಕ್ಷಿ ಅಂಬುಲೈನ್ಸನಲ್ಲಿ ಕರೆದುಕೊಂಡು ಹೋಗಲಾಯಿತು ಎನ್ನುತ್ತಾರೆ. ಸದರಿ ಗಾಯಾಳುವಿನ ಮನೆಗೆ ಹೋಗಿ ಭೇಟಿಯಾಗುವುದು ಅಥವಾ ಕಿಮ್ಸಗೆ ಹೋಗಿ ಭೇಟಿ ಮಾಡಿದ್ದೀರಾ ಎಂದರೆ ಸಾಕ್ಷಿ ಹೋಗಿಲ್ಲ ಎನ್ನುತ್ತಾರೆ, ಸದರಿ ಅಪಘಾತ ಆಗಿಲ್ಲ ಎಂದರೆ ಅರ್ಜಿದಾರರು ಗಾಯ ಹೊಂದುತ್ತಿರಲಿಲ್ಲ, ಆರಾಮವಾಗಿ ಇರುತ್ತಿದ್ದರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಾನು ಗಾಡಿಯನ್ನು ಅತೀ ವೇಗವಾಗಿ ಚಲಾಯಿಸಿದ್ದರಿಂದ ಅಪಘಾತವಾಗಿದೆ ಆ ಕಾರಣಕ್ಕೆ ಆತ ಗಾಯಗೊಂಡಿದ್ದಾರೆ ಎಂದರೆ ಸಾಕ್ಷಿ ಅದು ಕಚ್ಚಾ ರಸ್ತೆ

ಇರುವ ಕಾರಣ ವೇಗವಾಗಿ ಹೋಗಲು ಬರುವುದಿಲ್ಲ ಎನ್ನುತ್ತಾರೆ. ಹಾಗಾದರೆ ಅಪಘಾತ ಹೇಗೆ ಆಯಿತು ಎಂದರೆ ಸಾಕ್ಷಿ ಟಾಯರ ಬಸ್ಟ ಆಯಿತು ಎನ್ನುತ್ತಾರೆ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ